# ಸುದ್ದಿ ಸಂಚಯ

* **ಸ್ವಾಮಿ** ವಿವೇಕಾನಂದರು ತಮ್ಮ ಬಾಲ್ಯಾವಸ್ಥೆಯಲ್ಲಿ ಕಲ್ಕತ್ತೆಯ ನಂತರ ಹೆಚ್ಚುಕಾಲ ಇದ್ದದ್ದು ರಾಯಪುರದಲ್ಲಿ. ಸ್ವಾಮಿಜಿಯ ತಂದೆ ತಾಯಿಗಳು ೧೮೭೭ರಿಂದ ೧೮೭೯ರವರೆಗೆ ರಾಯಪುರದ ಬೂಡ ತಲಾಬ್ ಎಂಬ ಕೆರೆಯ ಬಳಿ ವಾಸ್ತವ್ಯ ಹೂಡಿದ್ದಾಗ, ತಮ್ಮ ಕೌಮಾರಾವಸ್ಥೆಯ ಎರಡು ಮೂರು ವರ್ಷಗಳನ್ನು ಇಲ್ಲಿ ಕಳೆದಿದ್ದರು. ಈ ಕೆರೆಯನ್ನು ಇದೀಗ ವಿವೇಕಾನಂದ ಸರೋವರ ಎಂದು ಹೆಸರಿಸಲಾಗಿದೆ. ಅವರು ವಾಸವಾಗಿದ್ದ ಮನೆ ಯಾವುದು ಎಂಬುದರ ಬಗ್ಗೆ ನಿಜಿತವಾದ ಮಾಹಿತಿ ಇಲ್ಲವಾದರೂ ಅದು ಪಕ್ಕದಲ್ಲೇ ಇರುವಂತಹ ಬುಡೇಶ್ವರ ಶಿವನ ದೇವಸ್ಥಾನದ ಬಳಿ ಇತ್ತು ಎಂಬುದಾಗಿ ಹೇಳಲಾಗುತ್ತಿದೆ. ಛತ್ತೀಸ್‌ಘಡ ರಾಜ್ಯ ಸರ್ಕಾರ ಹಾಗೂ ರಾಯಪುರ ನಗರ ಪಾಲಿಕೆ ಈ ವಿವೇಕಾನಂದ ಸರೋವರದ ಮಧ್ಯದಲ್ಲಿ ಸ್ವಾಮಿ ವಿವೇಕಾನಂದರ ಒಂದು ಬೃಹತ್ ಪ್ರತಿಮೆಯನ್ನು ಈ ವರ್ಷದ ಏಪ್ರಿಲ್‌ನಲ್ಲಿ ಸ್ಥಾಪಿಸಿ ಈ ದಿವ್ಯ ಸ್ಮಾರಕದ ಮೂಲಕ ತಮ್ಮ ಗೌರವವನ್ನು ಸಲ್ಲಿಸಿವೆ. ಈ ಸ್ಮಾರಕವನ್ನು ಭಾರತದ ಮಾಜಿ ಪ್ರಧಾನಿ ಶ್ರೀ ಎ.ಬಿ. ವಾಜಪೇಯಿ ಅವರು ೧೬ ಏಪ್ರಿಲ್ ೨೦೦೫ರಂದು ಉದ್ಘಾಟಿಸಿದರು. ರಾಯಪುರ ರಾಮಕೃಷ್ಣ ಮಿಷನ್ನಿನ ಮುಖ್ಯಸ್ಥರಾದ ಸ್ವಾಮಿ ಸತ್ಯರೂಪಾನಂದಜಿ ಮುಂತಾದ ಅನೇಕ ಪ್ರಮುಖರು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಧ್ಯಾನಸ್ಥ ಭಂಗಿಯಲ್ಲಿರುವ ಈ ಸ್ವಾಮಿಜಿಯ ಪ್ರತಿಮೆಯನ್ನು ಭಿಲಾಯ್ ನಿವಾಸಿಯಾದ ಶ್ರೀ ಜೆ.ಎಂ. ನೆಲ್ಸನ್ ಎಂಬ ಪ್ರಸಿದ್ಧ ಶಿಲ್ಪಿ ತಯಾರಿಸಿದ್ದಾರೆ. ೩೧ ಅಡಿ ಎತ್ತರವಿರುವ ಈ ಪ್ರತಿಮೆ ೬ ಅಡಿ ಎತ್ತರ ಹಾಗೂ ೨೨ ಚ.ಅ. ವಿಸ್ತಾರವಿರುವ ವೇದಿಕೆಯ ಮೇಲೆ ಪ್ರತಿಷ್ಠಿತವಾಗಿದ್ದು, ಅರವತ್ತು ಟನ್ ಸಿಮೆಂಟ್‌ನಿಂದ ತಯಾರಿಸಲಾಗಿದೆ. ವೇದಿಕೆಯ ಮೇಲೆ ಸ್ವಾಮಿಜಿಯ ಸ್ಫೂರ್ತಿದಾಯಕ ನುಡಿಗಳನ್ನು ಕೆತ್ತಲಾಗಿದೆ. ಈ ಸ್ಮಾರಕದ ನಿರ್ಮಾಣಕ್ಕೆ ಹತ್ತು ಲಕ್ಷ ರೂಪಾಯಿ ವೆಚ್ಚವಾಗಿದೆ.

* **ಪ**ವಿತ್ರವಾದ ರಥಯಾತ್ರೆಯ ಸಂದರ್ಭದಲ್ಲಿ ಪುರೀ ಕ್ಷೇತ್ರದಲ್ಲಿರುವ ರಾಮಕೃಷ್ಣ ಮಠವು ವೈದ್ಯಕೀಯ ಶಿಬಿರವನ್ನು ಜುಲೈ ೮ರಿಂದ ೧೬ರವರೆಗೆ ನಡೆಸಿತು. ೩,೨೪೯ ರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು. ೧೧,೨೦೦ ಯಾತ್ರಿಕರಿಗೆ ಪಾನೀಯವನ್ನು ನೀಡಲಾಯಿತು. ಇದೇ ಸಮಯದಲ್ಲಿ ರಾಮಕೃಷ್ಣ ಮಿಷನ್ ಕೇಂದ್ರವು ೧೪,೦೦೦ ಯಾತ್ರಿಕರಿಗೆ ಪಾನೀಯವನ್ನು ನೀಡಿತು.

* **ಚೆನ್ನೈ**ನಲ್ಲಿರುವ ರಾಮಕೃಷ್ಣ ಮಠವು ಚೆಂಗಲ್‌ಪಟ್ಟು



ಪ್ರತಿಮೆಯನ್ನು ಉದ್ಘಾಟನೆ ಮಾಡುತ್ತಿರುವ ಶ್ರೀ ವಾಜಪೇಯಿ, ಎಡದಿಂದ, ಮುಖ್ಯಮಂತ್ರಿ ಶ್ರೀ ರಮಣಸಿಂಗ್, ಸ್ವಾಮಿ ಸತ್ಯರೂಪಾನಂದಜಿ ಮುಂತಾದವರು.

ಕೇಂದ್ರದ ಮೂಲಕ ದೃಷ್ಟಿಹೀನರಿಗೆ ಜುಲೈ ೧೬ರಂದು ತಪಾಸಣೆಯನ್ನು ಆಯೋಜಿಸಿ ೨೬೮ ರೋಗಿಗಳು ಇದರ ಸಹಾಯ ಪಡೆದಿದ್ದಾರೆ. ೨೦೩ ಜನರಿಗೆ ಉಚಿತವಾಗಿ ಕನ್ನಡಕವನ್ನು ನೀಡಲಾಗಿದೆ ಹಾಗೂ ೨೪ ರೋಗಿಗಳಿಗೆ ಶಸ್ತ್ರಚಿಕಿತ್ಸೆಯನ್ನು ಮಾಡಿಸಲಾಗಿದೆ. ಜುಲೈ ತಿಂಗಳಲ್ಲಿ ಬೆಂಗಳೂರಿನ ಅಲಸೂರಿನಲ್ಲಿರುವ ರಾಮಕೃಷ್ಣ ಮಠವು ೨೭೯ ರೋಗಿಗಳ ತಪಾಸಣೆ ಮಾಡಿಸಿ ೧೩೩ ರೋಗಿಗಳಿಗೆ ಕಣ್ಣಿನ ಶಸ್ತ್ರಚಿಕಿತ್ಸೆಯನ್ನು ಮಾಡಿಸಿದೆ. ಲಕ್ನೌ ಹಾಗೂ ಪೋರ್‌ಬಂದರ್ ಕೇಂದ್ರಗಳೂ ಕೂಡ ದೃಷ್ಟಿಹೀನರಿಗೆ ಉಚಿತ ಚಿಕಿತ್ಸೆ ಒದಗಿಸಿವೆ. ೫೨ ರೋಗಿಗಳು ಉಪಯೋಗ ಪಡೆದುಕೊಂಡಿದ್ದಾರೆ.

* **ನೆರೆಹಾವಳಿ ಪರಿಹಾರ** : ಇತ್ತೀಚೆಗೆ ವಿಪರೀತ ಮಳೆಯಿಂದಾಗಿ ಉತ್ತರ ಭಾರತದ ಹಲವೆಡೆಗಳಲ್ಲಿ ನದಿಗಳು ಉಕ್ಕಿಹರಿದು, ಪ್ರವಾಹ ಪೀಡಿತ ಜನರಿಗೆ ಪರಿಹಾರ ಒದಗಿಸಲು ಗುಜರಾತ್ ಹಾಗೂ ಮಹಾರಾಷ್ಟ್ರದಲ್ಲಿರುವ ರಾಮಕೃಷ್ಣ ಮಠ ಮತ್ತು ಮಿಷನ್ ಶಾಖೆಗಳು ಪ್ರಯತ್ನಿಸುತ್ತಿವೆ. ಅಹಮದಾಬಾದ್, ಅಮ್ರೇಲಿ, ಆನಂದ್, ಜುನಾಘಡ್, ಖೇದಾ, ರಾಜಕೋಟ್, ಸುರೇಂದ್ರನಗರ ಹಾಗೂ ವಡೋದರಗಳಲ್ಲಿ ಆಹಾರಧಾನ್ಯಗಳು, ಎಣ್ಣೆ, ತರಕಾರಿ, ಹಾಲಿನಪುಡಿ, ಕುಡಿಯುವ ನೀರು, ಬಟ್ಟೆ, ಕಂಬಳಿ, ಅಡುಗೆ ಪಾತ್ರೆಗಳನ್ನು ವಿತರಿಸಲಾಗಿದೆ. ರಾಜಕೋಟ್ ಕೇಂದ್ರವು ೯೫, ೪೦೧ ಜನರಿಗೆ ಈ ಎಲ್ಲ ವಸ್ತುಗಳನ್ನು ನೀಡಿದೆ. ವಡೋದರ ಕೇಂದ್ರವು ೯೭,೮೭೩, ಜನರಿಗೆ ಇವುಗಳನ್ನು ನೀಡಿದೆ. ಇದಲ್ಲದೆ ವೈದ್ಯಕೀಯ ಸೌಲಭ್ಯಗಳನ್ನೂ ಒದಗಿಸಲಾಗಿದೆ. ಪುಣೆ ಕೇಂದ್ರವು ೫೦೦ ಮನೆಗಳಿಗೆ ಆಹಾರ ಪದಾರ್ಥಗಳನ್ನು ನೀಡಿದೆ.